**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 17.04.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ.ಎಸ್ ಕೆ ಕೆ ವಕೀಲರಿಂದಃ**

ನನ್ನ ಜನ್ಮ ದಿನಾಂಕ 04/02/1977 ಆಗಿರುತ್ತದೆ. ನಾನು ಶಾಲೆಗೆ ಹೋಗಿ ವಿದ್ಯಾಭ್ಯಾಸ ಮಾಡಿರುವುದಿಲ್ಲ ಆದರೆ ಶಾಸ್ತ್ರಾಭ್ಯಾಸ ಮಾಡಿರುತ್ತೇನೆ ಅಲ್ಲಿಯೇ ನಮಗೆ ವಿದ್ಯಾಭ್ಯಾಸ ಕೂಡ ಹೇಳಿಕೊಟ್ಟಿರುತ್ತಾರೆ ಎನ್ನುತ್ತಾರೆ. ನಾನು ಪ್ರತ್ಯಾತ ಮುಳಂದ ವಿದ್ಯಾಪೀಠ ಮತ್ತು ಪೂರ್ಣಪ್ರಜ್ಞೆ ವಿದ್ಯಾಪೀಠದಲ್ಲಿ ಶಾಸ್ತ್ರ ಅಧ್ಯಯನ ಮಾಡಿರುತ್ತೇನೆ ಎಂದು ಹೇಳಿದ್ದು ಈ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅಪಘಾತದ ಬಗ್ಗೆ ದೂರನ್ನು ಯಾರು ಕೊಟ್ಟರು ಎಂದರೆ ಸಾಕ್ಷಿ ಯಾರು ಕೊಟ್ಟರು ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮಯೂರ ಸಿದ್ದಾಪುರ ಯಾರು ಎಂದರೆ ಸಾಕ್ಷಿ ಅವರು ಯಾರೆಂದು ನನಗೆ ಗೊತ್ತಿಲ್ಲ ಅಪಘಾತವಾದ ಸಮಯದಲ್ಲಿ ಇದ್ದೀರಬಹುದು ಎನ್ನುತ್ತಾರೆ. ಮಯೂರ ಸಿದ್ದಾಪುರ ಇವರು ನಮಗೆ ಪರಿಚಯದವರೆಂದು ದೂರಿನಲ್ಲಿ ಇದೆ ಅದು ಹೌದೋ ಅಲ್ಲವೋ ಎಂದರೆ ಸಾಕ್ಷಿ ಅವರ ತಂದೆ ನಮಗೆ ಪರಿಚಿತರು ಎನ್ನುತ್ತಾರೆ. ಸದರಿ ಅಪಘಾತವಾದ ಸಮಯದಲ್ಲಿ ನಾನು ಮೋಟಾರ್ ಸೈಕಲ್ ನಡೆಸುತ್ತಿದ್ದೆ ಎಂದರೆ ಸರಿ. ಪೊಲೀಸರು ಹಾಜರಪಡಿಸಿರುವ ಸ್ಕೆಚ್ ನ ಪ್ರಕಾರ ನನ್ನ ಎಡಬದಿಗೆ ಇನ್ನೂ ಅಡಿ ರಸ್ತೆ ಇತ್ತು ಎಂದರೆ ಸಾಕ್ಷಿ ನಾನು ಬಲಗಡೆಗೆ ಹೋಗಬೇಕಾಗಿದ್ದರಿಂದ ನಾನು ಬಂದಾಗ ಅವರು ಆ ಕಡೆಯಿಂದ ಬಂದರು ಎನ್ನುತ್ತಾರೆ. ಮೋಟಾರ್ ಸೈಕಲ್ ಹಾಗೂ ಲಾರಿ ಎರಡು ಒಂದೇ ದಿಕ್ಕಿನಲ್ಲಿ ಹೊರಟಿದ್ದವು. ನಾನೇ ಏಕಾಏಕಿ ಬಲಬದಿಗೆ ಹೋಗಲು ಬಂದು ಏಕಾಏಕಿ ಬಿದ್ದು ಡಿಕ್ಕಿಪಡಿಸಿಕೊಂಡಿರುತ್ತೇನೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ನಾನು ಬೆಂಗಳೂರಿನಲ್ಲಿ ಆಸ್ಪತ್ರೆ ಸಮೀಪ ಬಾಡಿಗೆ ತೆಗೆದುಕೊಂಡು ವಾಸವಾಗಿದ್ದೆ ಎಂದು ಹೇಳಿದ್ದು ಈ ಬಗ್ಗೆ ದಾಖಲೆ ಇದೆಯಾ ಎಂದರೆ ಇಲ್ಲ ಎನ್ನುತ್ತಾರೆ. ಅದೇ ರೀತಿ ಓಲಾ ಕ್ಯಾಬ್‌ಗೆ ಎಷ್ಟು ಖರ್ಚು ಮಾಡಿದಿರಿ ಎಂದು ಹೇಳಲು ಆಗುತ್ತದೆಯಾ ಆ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಬೆಂಗಳೂರಿನಲ್ಲಿ ಡ್ರೆಸ್ಸಿಂಗ್ ಮಾಡಿಸಲು ಖರ್ಚು ಮಾಡಿದ್ದೇನೆ ಎಂದು ಹೇಳಿದ್ದು ಆ ಬಗ್ಗೆ ದಾಖಲೆ ಇದೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನನಗೆ ಪ್ರತಿತಿಂಗಳು 40 ಸಾವಿರ ರೂ. ಆದಾಯವಿತ್ತು ಎಂದು ತೋರಿಸಲು ದಾಖಲೆ

ಇರುವುದಿಲ್ಲ. ಅದೇ ರೀತಿ ನಾನು ವೈದಿಕ ನಡೆಸುತ್ತಿದ್ದೆ ಎಂದು ತೋರಿಸಲು ದಾಖಲೆಗಳು ಇವೆಯಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅಪಘಾತ ಪೂರ್ವದಲ್ಲಿ ನಾನು ಪೂಜಾ ಕೈಂಕರ್ಯಗಳನ್ನು ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಇಲ್ಲ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಮುಂಜವಿ ಮಾಡಿಸಿದರೆ ಒಂದು ಸಾವಿರ ರೂ. ಹಾಗೂ ಸತ್ಯನಾರಾಯಣ ಪೂಜೆ, ಗಣ ಹೋಮ, ವಾಸ್ತು ಹೋಮ ಇತ್ಯಾದಿಗಳಿಗೆ 500/- ರೂ. ಹಾಗೂ 4000/- ರೂ.ಗಳನ್ನು ತೆಗೆದುಕೊಳ್ಳುತ್ತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ನಾನು ಈ ಪೂಜೆಗಳನ್ನೆಲ್ಲ ಮಾಡುತ್ತಿದ್ದು ಈಗ ನನ್ನ ಕೈ ನೋವಾಗಿರುವ ಕಾರಣ ಅವುಗಳನ್ನು ಮಾಡಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಗನ್ಯೂನ್ಯತೆ ಇರುವ ವ್ಯಕ್ತಿ ಪೂಜಾ ಕಾರ್ಯಗಳನ್ನು ಮಾಡಬಾರದು ಎಂದು ಯಾವುದೇ ನಿಷೇದ ಇಲ್ಲ ಎಂದರೆ ಸಾಕ್ಷಿ ಇದೆ ಎನ್ನುತ್ತಾರೆ. ಯಾವ ಧರ್ಮದಲ್ಲಿ ಆ ರೀತಿ ನಿಷೇದ ಇದೆ ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ಆಸ್ಪತ್ರೆಗೆ ಓಡಾಡಲು ಒಂದು ಲಕ್ಷ 50 ಸಾವಿರ ರೂ. ಖರ್ಚು ಮಾಡಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ ಎಂದರೆ ಇಲ್ಲ ಎನ್ನುತ್ತಾರೆ. ನನ್ನ ಕಡೆಯಿಂದ ತಪ್ಪಾಗಿದ್ದರೂ ಲಾರಿಯವರ ಮೇಲೆ ಸುಳ್ಳು ಪಿರ್ಯಾದಿ ಕೊಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(1 ಮತ್ತು 3 ನೇ ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**